**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 27/2017** **ಪ್ರಾ.ಸಾ.21**

**ಚಾ.ಸಾ.28**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿನೇಶ್ ಶೆಟ್ಟಿ |
| ತಂದೆಯ ಹೆಸರು | - | ಸಂಜೀವ ಶೆಟ್ಟಿ |
| ವಯಸ್ಸು | - | 51 ವರ್ಷ |
| ಉದ್ಯೋಗ | - | ಹೋಟೆಲ್ |
| ವಿಳಾಸ | - | ಬೈಲೂರು, ಹಿರಿಯಡ್ಕ. |

ದಿನಾಂಕಃ 10-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಕಳೆದ 15 ವರ್ಷಗಳಿಂದ ಹಿರಿಯಡ್ಕದಲ್ಲಿ ದಿಯಾ ಬಾರ್ ಅಂಡ್ ರೆಸ್ಟೋರೆಂಟ್ ಎಂಬ ಹೋಟೆಲನ್ನು ನಡೆಸುತ್ತಿದ್ದೇನೆ. ನಮ್ಮ ಬಾರ್ ಅಂಡ್ ರೆಸ್ಟೋರೆಂಟ್ ಬೆಳಿಗ್ಗೆ 10-00 ರಿಂದ ರಾತ್ರಿ 10-30 ರವರೆಗೆ ತೆರೆದಿರುತ್ತದೆ. ಮೃತ ಒಂದನೇ ಆರೋಪಿ ಪ್ರವೀಣ್ ಕುಲಾಲ್ ಈತನ ಪರಿಚಯ ಇದ್ದು ಆತ ನಮ್ಮ ಬಾರ್ ನ ಗ್ರಾಹಕನಾಗಿರುತ್ತಾನೆ. 2016 ನೇ ಸಾಲಿನಲ್ಲಿ ಮೃತ ಈ ಪ್ರಕರಣದ ಒಂದನೇ ಆರೋಪಿ ಈತನ ಕೊಲೆ ನಮ್ಮ ದಿಯಾ ಬಾರ್ ನ ಎದುರುಗಡೆ ಆಗಿರುತ್ತದೆ. ಕೊಲೆಯಾದ ಸುಮಾರು ಒಂದು ದಿನದ ನಂತರ ಕೊಲೆಯಾದ ಸ್ಥಳಕ್ಕೆ ಪೋಲಿಸರು ಬಂದಿದ್ದು ಆ ಸ್ಥಳವನ್ನು ಪರಿಶೀಲಿಸಿ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಸೊತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆ ಸಂದದರ್ಬದಲ್ಲಿ ಪೋಲಿಸರು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿದ್ದು, ಸದ್ರಿ ದಾಖಲೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ. ಈಗ ತೋರಿಸಿದ ಮಹಜರಿನ ನಿಜ ಪ್ರತಿಯನ್ನು ನೋಡಿ ಸಾಕ್ಷಿ ತನ್ನ ಸಹಿ ಗುರುತಿಸಿದ್ದು, ಸದ್ರಿ ದಾಖಲೆಯನ್ನು ನಿಪಿ-61 ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 19-12-2016 ರಂದು ಪೋಲಿಸರು ಒಂದನೇ ಆರೋಪಿ ಮೃತ ಪ್ರವೀಣ್ ಕೊಲೆಯಾಗಿರುವಂತಹಾ ಸ್ಥಳ ಬೊಮ್ಮರಬೆಟ್ಟು ಗ್ರಾಮದ ಕೋಟ್ನಕಟ್ಟೆ ಎಂಬಲ್ಲಿರುವ ದಿಯಾ ಗಾರ್ಡನ್ ಅಂಡ್ ರೆಸ್ಟೋರೆಂಟ್ ನಲ್ಲಿಯ ಒಂದನೇ ಆರೋಪಿ ಕೊಲೆಯಾದ ಸ್ಥಳಕ್ಕೆ ಬಂದಿದ್ದು ಆ ಸಂದರ್ಬದಲ್ಲಿ ಪೋಲಿಸರು ಒಂದನೇ ಆರೋಪಿಗೆ ಸೇರಿದ ಕೆಎ-19-ಎಂಬಿ-1616 ಕಾರು ಹಾಗೂ ಒಂದು ಡಮ್ಮಿ ಪಿಸ್ತೂಲು ಹಾಗೂ ಇನ್ನಿತರ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ-61 ರಂತೆ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಕಾರು ಮತ್ತು ಡಮ್ಮಿ ಪಿಸ್ತೂಲನ್ನು ಒಂದನೇ ಆರೋಪಿ ಈ ಪ್ರಕರಣದಲ್ಲಿ ಉಪಯೋಗಿಸಿದ್ದಾನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.